**ಮೂ.ದಾ.ನಂ.66/2018**

ಪಿ.ಡಬ್ಲ್ಯು.1

(ಇಂದು ದಿನಾಂಕ: **26-03-2025** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಶ್ರೀ.ವಾಯ್. ವಿ. ಎಸ್. ವಕೀಲರಿಂದಃ**

ನನಗೆ ಭತ್ತ ಬೆಳೆಸುವಂತಹ ತರಿ ಸ್ಥಳ ಇದೆಯಾ ಎಂದರೆ ಸಾಕ್ಷಿಯು ದಾವಾ ಸ್ಥಳದಲ್ಲಿಯೇ ನಾವು ಭತ್ತವನ್ನು ಬೆಳೆಸುತ್ತಿದ್ದೇವು ಎಂದು ನುಡಿಯುತ್ತಾರೆ. ದಾವಾ ಸ್ಥಳವು ಬಿನ್ ಶೇತ್ಕಿ ಸ್ಥ.ಳ ಎಂದರೆ ಸರಿ. ದಾವಾ ಸ್ಥಳವನ್ನು ಹೊರತುಪಡಿಸಿ ಬೇರೆ ಯಾವುದೇ ಜಾಗ ಇರುವುದಿಲ್ಲ. ನಾನು ಉಳುಮೆ ಮಾಡುತ್ತೇನೆ ಎನ್ನಲಾದ ನಿಡಿ 1 ರಲ್ಲಿರುವ ಎರಡು ಗದ್ದೆಗಳಿಗೆ ಪ್ರತಿ ಗುಂಟೆಗೆ ಎಷ್ಟು ಕೊಳಗ ಬೀಜ ಭತ್ತ ಬೇಕು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರಿದು ಸದ್ರಿ ವಿಷಯವನ್ನು ಕೆಲಸಗಾರರು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಪುನಃ ಮುಂದುವರಿದು ನಾನು 4 ಗದ್ದೆಯನ್ನು ಉಳುಮೆ ಮಾಡುತ್ತೇನೆ ಎಂದು ನುಡಿಯುುತ್ತಾರೆ. ಒಂದು ಕೊಳಗ ಎಂದರೆ ಎಷ್ಟು ಕೆ ಜಿ ಎಂದು ನನಗೆ ಮಾಹಿತಿ ಇಲ್ಲ. ನಿಡಿ 1 ರಲ್ಲಿ ತೋರಿಸಿದ ಗದ್ದಗಳಿಗೆ ಎಷ್ಟು ಕೆಜಿ ಭತ್ತದ ಬಿಜ ಬೇಕು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಕೆಂದರೆ ಸದ್ರಿ ಕೆಲಸವನ್ನು ಆಳುಗಳು ಮಾಡುತ್ತಾರೆ. ನಿಡಿ 1 ರಲ್ಲಿ ಕಾಣಿಸಿದ ಗದ್ದೆಗಳಿಗೆ ಉಳುಮೆ ಮಾಡಿ ಫಲ ಪಡೆಯಲು ನನಗೆ 8000/- ಖರ್ಚಾಗುತ್ತದೆ. ಎಷ್ಟು ಮಾಣಗಿ ಭತ್ತ ಬರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಡಿ 1 ರಲ್ಲಿ ಕಾಣಿಸಿದ ಗದ್ದೆಗಳಿಂದ ನನಗೆ ಎಷ್ಟು ಕ್ವಿಂಟಲ್ ಭತ್ತ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನನಗೆ ಇರುವ ಎಲ್ಲಾ ಗದ್ದೆಗಳಲ್ಲಿ ಒಟ್ಟಾಗಿ 12 ಕ್ವಿಂಟಲ್ ಭತ್ತ ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ಥಳದಲ್ಲಿ ಇರುವ 7 ಗುಂಟೆ 8 ಆಣೆ ಸ್ಥಳದಲ್ಲಿ

ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಿ ಸದ್ರಿ ಸ್ಥಳವು ಅಷ್ಟು ಇದೆ ಎಂದು ಆಳತೆ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ನಾನು ದಾವಾ ಸ್ಥಳದಲ್ಲಿ ಮಣ್ಣು ಬರಾವ ಮಾಡಲು ತಯಾರು ನಡೆಸಿದ್ದೇನೆ ಎಂದರೆ ಏನು ಮಾಡಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಆಳುಗಳನ್ನು ಕರೆಸಿಕೊಂಡು ಬಂದು ಸ್ವಚ್ಛ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಪ್ರತಿವಾದಿಯರು ಬಂದು ನನಗೆ ತೊಂದರೆಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸದ್ರಿ ಜಾಗಕ್ಕೆ ಮಣ್ಣನ್ನು ತುಂಬಲು ಟಿಪ್ಪರನ್ನು ಕಳುಹಿಸಿದ್ದು, ಪ್ರತಿವಾದಿಗಳು ತಕರಾರು ಮಾಡಿದ ನಂತರದಲ್ಲಿ ಟಿಪ್ಪರ ವಾಪಸ್ಸ ಬಂದಿರುತ್ತದೆ. ನಾನು ಈ ಕುರಿತಾಗಿ ಪೊಲೀಸ ಫಿರ್ಯಾದಿಯನ್ನು ನೀಡಿರುತ್ತೇನೆ.

ಸಾಕ್ಷಿಯು ಮುಂದುವರಿದು ನಾನು ಪೊಲೀಸ್ ಫಿರ್ಯಾದನ್ನು ನೀಡಲು ಪೊಲೀಸ ಠಾಣೆಗೆ ಹೋದ ಸಂದರ್ಭದಲ್ಲಿ ಪ್ರತಿವಾದಿಗಳು ಜನರನ್ನು ಕರೆದುಕೊಂಡು ಪೊಲೀಸ ಠಾಣೆಗೆ ಕರೆದುಕೊಂಡು ಬಂದು ಒಂದು ತಿಂಗಳ ಕಾಲಾವಕಾಶ ನೀಡಿ ನಾವು ಜಾಗವನ್ನು ಆಳತೆ ಮಾಡಿಸುತ್ತೇವೆ ಎಂದು ಪೊಲೀಸ ನಿರೀಕ್ಷಕರ ಮುಂದೆ ಹೇಳಿರುತ್ತಾರೆ. ಈ ಕುರಿತಾಗಿ ಕೇವಲ ಮಾತುಕತೆಯಲ್ಲಿ ನಡೆದಿರುತ್ತದೆ. ನನಗೆ ದಾವಾ ಕಾರಣವು ಉದ್ಭವಿಸಲಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ಮಣ್ಣು ಬರಾವ ವಿಷಯ ಹಾಗೂ ಪೊಲೀಸ ಠಾಣೆಯ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ಪೊಲೀಸ ಠಾಣೆಯ ವಿಷಯವನ್ನು ನನ್ನ ವಾದ ಪತ್ರದಲ್ಲಿ ನಮೂದಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ ಸ್ಥಳದಲ್ಲಿ ನಾನು ಸಾಗುವಳಿಯನ್ನು ಮಾಡಿಕೊಂಡು ಭತ್ತವನ್ನು ಬೆಳೆಯಿಸುತ್ತಿದ್ದೇನೆ ಎಂಬ ಬಗ್ಗೆ ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿಲ್ಲ. ಈ ಕುರಿತಾಗಿ ನಾನು ನನ್ನ ವಕೀಲರಿಗೆ ತಿಳಿಸಿರುವುದಿಲ್ಲ.

**ಮೂ.ದಾ.ನಂ.66/2018**

ಪಿ.ಡಬ್ಲ್ಯು 1

ಸರ್ವೆ ನಂಬರ 58 ಹಿಸ್ಸಾ 1 ಅ ದಲ್ಲಿ 7 ಗುಂಟೆ 8 ಆಣೆ ಕ್ಷೇತ್ರ ಇಲ್ಲ ಎಂದರೆ ಸರಿಯಲ್ಲ. DDLR ಇವರ ಆದೇಶದಂತೆ 58 ಹಾಗೂ 59 ರ ಎಲ್ಲಾ ಹಿಸ್ಸಾಗಳನ್ನು ಒಂದುಗುಡಿಸಿ ಸರ್ವೆ ನಂಬರ 58 ಹಾಗೂ 59 ಆಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರದಲ್ಲಿ ತೋರಿಸಿದ ಚತುರ್ಗಡಿಗಳಲ್ಲಿ ನಾನು ಹೇಳುವಷ್ಟು 7 ಗುಂಟೆ 8 ಆಣೆ ಸ್ಥಳ ದಾವಾ ಆಸ್ತಿಯ ಹತ್ತಿರ ಇಲ್ಲ ಎಂದರೆ ಸರಿಯಲ್ಲ.

ಸರ್ವೆ ನಂಬರ 58 ಹಿಸ್ಸಾ 1 ಅ ಲಗ್ತ ಪೂರ್ವಕ್ಕೆ ಸರ್ವೆ ನಂಬರ 58 ಹಿಸ್ಸಾ 1 ಬ ಇದೆ ಎಂದರೆ ಸರಿ. ಸದ್ರಿ ಜಾಗದ ಕ್ಷೇತ್ರವು 4 ಗುಂಟೆ 4 ಆಣೆ ಎಂದರೆ ಸರಿ. ಈ 4 ಗುಂಟೆ 4 ಆಣೆ ಸ್ಥಳವು ನಿಡಿ 1 ರಲ್ಲಿ ಕಾಣುವ ಎರಡು ಗದ್ದೆಗಳು ಎಂದರೆ ಸರಿಯಲ್ಲ. ನಿಡಿ 1 ರಲ್ಲಿ ಕಾಣಿಸುವ ಎರಡು ಗದ್ದೆಗಳು ಅಜಮಾಸು 103 ಫೂಟು ಉದ್ದ ಹಾಗೂ 45 ಫೂಟು ಅಗಲ ಇದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ